# ಬರಹ ರಾಜಕೀಯ ವಾಸ್ತವಕ್ಕಿಂತ ಅನ್ಯವಾದುದಲ್ಲ...

## ಲೂಯಿಸಾ ವೆಲಂಜುವೆಲ ಜೊತೆಗೆ ಒಂದು ಸಾಹಿತ್ಯಿಕ ಸಂವಾದ

ಸಂದರ್ಶನ: **ಕನಕರಾಜ್ ಆರನಕಟ್ಟೆ**
**ಪೆರುಂದೇವಿ**

ದಕ್ಷಿಣ ಅಮೆರಿಕ ದೇಶಗಳ ಸಾಹಿತ್ಯ ನಮ್ಮದೇ ಸಾಹಿತ್ಯ ಎನ್ನುವ ಮಟ್ಟಿಗೆ ಭಾರತದ ಬಹುತೇಕ ಭಾಷೆಗಳ ಸಾಹಿತ್ಯಭ್ಯಾಸಿಗಳು ಭಾವಿಸಿದ್ದಾರೆ. ಗಾಬ್ರಿಯಲ್ ಗಾರ್ಸಿಯಾ ಮಾರ್ಕೇಸ್, ನೆರೂಡ, ಕೊರ್ತಜರ್ – ಹೀಗೆ ದೂರದ ದಕ್ಷಿಣ ಅಮೆರಿಕ ದೇಶಗಳ ಅನೇಕ ಸಾಹಿತಿಗಳು ನಮ್ಮ ಪುಸ್ತಕ ಕಪಾಟುಗಳೊಳಗೆ ಮೊದಲ ಸಾಲುಗಳಲ್ಲಿದ್ದಾರೆ. ಅವರ ಕೃತಿಗಳು ಜಾಗತಿಕ ಸಾಹಿತ್ಯಕ್ಕೆ ಹೊಸ ಸಂಚಲನ ಮೂಡಿಸಿದ್ದು ಅನೇಕರಿಗೆ ತಿಳಿದೇ ಇದೆ. 'ಮಾಯಾವಾಸ್ತವ' (ಮ್ಯಾಜಿಕ್ ರಿಯಲಿಸಂ) ಎನ್ನುವ ಹೊಸ ನಿರೂಪಣಾ ಶೈಲಿಯನ್ನು ಜಗತ್ತಿಗೆ ಪರಿಚಯಿಸಿದ ದಕ್ಷಿಣ ಅಮೆರಿಕ ಸಾಹಿತ್ಯ, ಯೂರೋಪ್‌ನ ವಾಸ್ತವವಾದಿ ಗ್ರಹಿಕೆಗೆ ದೊಡ್ಡ ಸವಾಲೊಡ್ಡಿ ಯೂರೋಪೇತರ ದೇಶಗಳ ಸಾಹಿತ್ಯದ ದಿಕ್ಕನ್ನೇ ಬದಲಿಸಿತು. ನಮ್ಮಲ್ಲಿ ಕೆಲವರು, 'ಮಾಯಾವಾಸ್ತವ' ನಿರೂಪಣಾ ಮಾದರಿಯನ್ನು ಪುರಾಣ ಪುಣ್ಯ ಕಥೆಗಳಿಗೆ ಹೋಲಿಸಿ ಈ ಪ್ರಕಾರ ಸಾವಿರಾರು ವರ್ಷಗಳ ಮುಂಚೆಯೇ ನಮ್ಮಲ್ಲಿತ್ತು ಎಂದು ವಾದಿಸುತ್ತಾರೆ. ಯೂರೋಪೇತರ ದೇಶಗಳಲ್ಲಿದ್ದ ಜನಪದ ಕಥೆಗಳಿಂದ ಈ 'ಮಾಯಾವಾಸ್ತವ' ಸ್ಫೂರ್ತಿ ಪಡೆದಿದ್ದರೂ ಅದರ ಮುಖ್ಯಭೂಮಿಕೆ ವಸಾಹತುಶಾಹಿ/ಆಂತರಿಕ ಶೋಷಣೆಯ ವಿರುದ್ಧದ ನಿರೂಪಣೆ ಮತ್ತು ಯೂರೋಪಿನ ಏಕಮುಖ 'ವಾಸ್ತವಕ್ಕೆ' ಎದುರಾದ ಬಹುಮುಖದ ಸಾಮಾನ್ಯರ ನೋಟಗಳೇ 'ಮ್ಯಾಜಿಕ್ ರಿಯಲಿಸಂ'. ಈ ಕಾಲಘಟ್ಟದ ನಂತರ ದಕ್ಷಿಣ